**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿ:21-03-2022**

**ಪಾಟೀ ಸವಾಲು:** 2 ರಿಂದ 4 ಮತ್ತು 6 ರಿಂದ 8 ನೇ ಪ್ರತಿವಾದಿಯರ ಪರ ಶ್ರೀ ಸಿ.ಡಿ.ಎಸ್ ವಕೀಲರಿಂದ

ವಾದಿ ಈ ದಾವಾ ದಾಖಲಿಸಿದ ಕಾರಣ ತಿಳಿದುಕೊಂಡಿರುತ್ತೇನೆ. ವಾದಿಯು ಅವರ ಹಿಸ್ಸೆ ಕೇಳಿ ದಾವಾ ಸಲ್ಲಿಸಿರುತ್ತಾರೆ. **3** ನೇ ಪ್ರತಿವಾದಿ ನನ್ನ ಖಾಸಾ ಅತ್ತಿಗೆ ಎಂದರೆ ಸರಿ. ನಾನು , ನನ್ನ ಸಹೋದರ ಮುರುಳಿ ತ್ರಿವೇನಡ್ರಂ ನಲ್ಲಿ ವಾಸವಿದ್ದೇವೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರ ಮುರಳಿ ಅನ್ಯೋನ್ಯವಾಗಿದ್ದೇವೆ. ನನ್ನ ಮತ್ತು ನನ್ನ ಸಹೋದರ ಮುರಳಿ ನಡುವೆ ಕುಟುಂಬದ ಆಸ್ತಿಯಲ್ಲಿ **2005** ರಲ್ಲಿ ವಿಭಾಗವಾಗಿರುತ್ತದೆ. ಅದರ ಸಂಬಂಧ ವಿಭಾಗಪತ್ರ ಆಗಿರುತ್ತದೆ ನನ್ನ ಸಹೋದರ ಮುರಳಿ ಸ್ವಲ್ಪ ವರ್ಷಗಳ ಕೆಳಗೆ ಅವರ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನಗೆ ಮದುವೆಯಾಗಿಲ್ಲ ಎಂದರೆ ಸರಿ. ಮುರಳಿ ತನ್ನ ಹಿಸ್ಸೆಗೆ ಬಂದ ಆಸ್ತಿ ಮಾರಾಟ ಮಾಡುವಾಗ ನನ್ನ ಮತ್ತು ಆತನ ನಡುವೆ ಘರ್ಷಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮಾವ ಜರ್ನಾಧನ್ ಕುರೂಪ್ ಮತ್ತು ನಾಗಮ್ಮ ರವರ ಮನೆಗೆ ವಿಶೇಷ ಕಾರ್ಯಕ್ರಮವಿದ್ದಾಗ ಮತ್ತು ಅವರು ಕರೆದಾಗ ಮಾತ್ರ ಬರುತ್ತೇನೆ ಎಂದರೆ ಸಾಕ್ಷಿದಾರರು **2000** ನೇ ಇಸವಿಯಿಂದ ಇಲ್ಲೇ ಇರುತ್ತೇನೆ ಎಂದು ನುಡಿಯುತ್ತಾರೆ. ಸಕಲೇಶಪುರದಲ್ಲಿ ನನಗೆ ಸೇರಿದ ಆಸ್ತಿ ಅಥವಾ ಯಾವುದೇ ವ್ಯಾಪಾರ ಇರುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಕೆಲಸಕ್ಕಾಗಿ ಸಕಲೇಶಪುರಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನು **2** ನೇ ಪ್ರತಿವಾದಿಯ ಗಂಡನಾದ ಸದಾನಂದರವರ ಅಂಗಡಿಯಲ್ಲಿ ಕೆಲಸಕ್ಕೆ ಬಂದಿರುತ್ತೇನೆ. **2** ನೇ ಪ್ರತಿವಾದಿಯ ಗಂಡನ ಅಂಗಡಿ ಮೈಸೂರು ಜಿಲ್ಲೆ , ಕೆ ಆರ್ ನಗರದಲ್ಲಿ ಇದೆ ಎಂದರೆ ಸರಿ. ನನಗೆ ಸಕಲೇಶಪುರದ ವಿಳಾಸದಲ್ಲಿ ಆಧಾರ್ ಕಾರ್ಡ್ ಇದೆ. ನಾನು **2015** ರಲ್ಲಿ ಆಧಾರ್ ಕಾರ್ಡ್ ನ್ನು ಸಕಲೇಶಪುರದ ಆನೆಮಹಲ್ ಕಲಾ ನಿಲಯ ವಿಳಾಸಕ್ಕೆ ಪಡೆದುಕೊಂಡಿರುತ್ತೇನೆ. ಈಗಲೂ ಸಹ ಆಧಾರ್ ಕಾರ್ಡ್ ಅದೇ ವಿಳಾಸಕ್ಕೆ ಇದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ವಾಸಸ್ಥಳ ಕುರುವಿಲ್ಲಾ ವೀಡು , ತಿರುವನಂತರಪುರ ಎಂದು ಬರೆಸಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವಾಗ ನಾನೇ ಕಲಾನಿಲಯ ವಿಳಾಸವನ್ನು ಹೇಳಿರುವುದಿಲ್ಲ. ನನ್ನ ತಂದೆ **2008** ರಲ್ಲಿ ಮೌತಿಯಾಗಿರುತ್ತಾರೆ , ನನ್ನ ತಾಯಿ ಈಗ **5-6** ವರ್ಷಗಳ ಹಿಂದೆ ಮೌತಿಯಾಗಿರುತ್ತಾರೆ. ಜನಾರ್ಧನ್ ಕುರೂಪ್ ಮತ್ತು ನಾಗಮ್ಮ

ರವರ ಮನೆಯಲ್ಲಿ ಯಾವುದೇ ಕಾರ್ಯಕ್ರಮ ಇದ್ದಲ್ಲಿ ನಮ್ಮ ತಂದೆ ತಾಯಿ ಭಾಗವಹಿಸುತ್ತಿದ್ದರು ಎಂದರೆ ಸರಿ. ಜನಾರ್ಧನ್ ಕುರೂಪ್ ಮತ್ತು ನಾಗಮ್ಮ ರವರ ಹೆಣ್ಣು ಮತ್ತು ಗಂಡು ಮಕ್ಕಳ ಮದುವೆ ಮಾಡುವ ಕಾಲಕ್ಕೆ ವರ ಅಥವಾ ವಧುವನ್ನು ನೋಡಲು ನಾವು ಹೋಗಿರುವುದಿಲ್ಲ ಎಂದರೆ ಸರಿ. ಜನಾರ್ಧನ್ ಕುರೂಪ್ ಮತ್ತು ನಾಗಮ್ಮ ರವರ ಮಗ ಜೆ. ಅನಿಲ್ ಕುಮಾರ್ ರವರಿಗೆ ವಧುವನ್ನು ನೋಡಲು ಮತ್ತು ಮದುವೆ ಮಾಡುವಾಗ ನನಗೆ ಯಾವುದೇ ಆಮಂತ್ರಣ ಕೊಟ್ಟಿರುವುದಿಲ್ಲ ಎಂದರೆ ಸರಿ. ವಾದಿಯ ಮದುವೆಗೆ ಅವರ ತಂದೆ ತಾಯಿ ನನಗೆ ಆಮಂತ್ರಣ ಪತ್ರಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಆದರೆ ಅವರು ನನ್ನನ್ನು ಮದುವೆಗೆ ಮೌಖಿಕವಾಗಿ ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಮೃತ ಅನಿಲ್ ರವರು ನನ್ನನ್ನು ಮದುವೆಗೆ ಕರೆದಿರುತ್ತಾರೆ. ವಾದಿಯ ಮದುವೆ ಎಲ್ಲಿ ಯಾರ ಸಮಕ್ಷಮ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ಮದುವೆಗೆ ಹೋಗಿರುವುದಿಲ್ಲ. **2** ರಿಂದ **4** ನೇ ವಾದಿಯರು ಜನಿಸಿದಾಗ ನಾನು ವಾದಿಯ ಮನೆಗೆ ಹೋಗಿ ಮಕ್ಕಳನ್ನು ನೋಡಿರುತ್ತೇನೆ. ಆಗ ವಾದಿ ಟೋಲ್ ಗೇಟ್ ಹತ್ತಿರ ಬಾಡಿಗೆ ಮನೆಯಲ್ಲಿ ವಾಸವಿದ್ದರು , ಸದರಿ ಮನೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಮೊದಲು ಅನಿಲ್ ರವರು ಪೌತಿಯಾಗಿರುತ್ತಾರೆ. ಅನಿಲ್ ರವರು ಪೌತಿಯಾದ **10-15** ವರ್ಷಗಳ ನಂತರ ನನ್ನ ಸೋದರತ್ತೆ ನಾಗಮ್ಮ ರವರು ಪೌತಿಯಾಗಿರುತ್ತಾರೆ. ಅನಿಲ್ ರವರು ಪೌತಿಯಾದ ನಂತರ ವಾದಿ ನಾಗಮ್ಮ ರವರ ಬಳಿ ಹೋಗಿ ಅನಿಲ್ ರವರಿಗೆ ಬರಬೇಕಾದ ಹಿಸ್ಸೆ ಕೊಡುವಂತೆ ಕೇಳಿರುತ್ತಾರೆ. ನಾಗಮ್ಮ ಮತ್ತು ವಾದಿಯ ನಡುವೆ ಆದ ಮಾತುಕತೆ ಬಗ್ಗೆ ನನಗೆ ಗೊತ್ತಿಲ್ಲ. ಅನಿಲ್ ರವರು ಹೃದಾಯಾಘಾತದಿಂದ ಲೀಲಾವತಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು ನಾನು ಅವರ ಅಂತಿಮ ಕ್ರಿಯೆಗೆ ಹೋಗಿರುತ್ತೇನೆ. ಅನಿಲ್ ರವರ ಶವ ಸಂಸ್ಕಾರ ಮತ್ತು ತಿಥಿ ಕಾರ್ಯ ಕಲಾನಿಲಯದಲ್ಲಿ ಆಗಿರುತ್ತದೆ. ವಾದಿಯ ಮನೆಯ ಹತ್ತಿರ ಆಗಿರುವುದಿಲ್ಲ. ನಾನು ಮತ್ತು ನಮ್ಮ ಕುಟುಂಬದವರು ವಾದಿ ಮತ್ತು ಆಕೆಯ ಮಕ್ಕಳನ್ನು ನಮ್ಮ ಮನೆ ತ್ರಿವೇನಡ್ರಂ ಗೆ ಕರೆದು ಊಟ ಉಪಚಾರ ಮಾಡಿಸಿರುತ್ತೇವೆ. ನನ್ನ ಸಹೋದರಿಯ ಮದುವೆ **10** ರಿಂದ **15** ವರ್ಷ ಪೂರ್ವದಲ್ಲಿ ಆಗಿರುತ್ತದೆ. ನನ್ನ ಸಹೋದರಿಯ ಮದುವೆಯಾದ **4-5** ವರ್ಷಗಳ ನಂತರ ನನ್ನ ತಮ್ಮನ ಮದುವೆಯಾಗಿರುತ್ತದೆ. ಅವರಿಬ್ಬರ ಮದುವೆ

ಆಮಂತ್ರಣ ಪತ್ರಿಕೆಯನ್ನು ಮಾಡಿಸಿ ಮದುವೆ ಅದ್ದೂರಿಯಾಗಿ ಮಾಡಿರುತ್ತೇವೆ. ನನ್ನ ತಂಗಿ , ತಮ್ಮನ ಮದುವೆಗೆ ವಾದಿ ಬಂದಿರುವುದಿಲ್ಲ. ವಾದಿಯು ನಮ್ಮ ಕುಟುಂಬದಲ್ಲಿ ಆದ ಯಾವುದೇ ಕಾರ್ಯಕ್ರಮ ಮತ್ತು ಮದುವೆ ಸಮಾರಂಭಗಳಲ್ಲಿ ಭಾಗಿಯಾಗಿರುವ ಯಾವುದೇ ಭಾವಚಿತ್ರಗಳು ನನ್ನ ಬಳಿ ಇರುವುದಿಲ್ಲ. ದಿಃ **26-06-1998** ರಲ್ಲಿ ಮೃತ ಅನಿಲ್ ಜೆ ರವರು ಕಮಲಾಕ್ಷಿ ಮತ್ತು ಪಾಪಣ್ಣ ರವರ ಮಗಳು ಪಾವನ ರವರನ್ನು ಮದುವೆಯಾಗಿರುತ್ತಾರೆ ಎಂದರೆ ಗೊತ್ತಿಲ್ಲ. ಪಾವನ ಮತ್ತು ಜೆ ಅನಿಲ್ ರವರ ಮದುವೆಯಾಗುವಾಗ ಇಬ್ಬರೂ ಬೇರೆ ಬೇರೆ ಜಾತಿಗೆ ಸೇರಿದ್ದರಿಂದ ಗಲಾಟೆಯಾಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂದರೆ ಸರಿ. ಮೃತ ಜೆ ಅನಿಲ್ ರವರು ಜೀವಂತವಿದ್ದಾಗ ಅವರು ಆಸ್ತಿಯ ಸಂಬಂಧ ಯಾವ ಯಾವ ವ್ಯವಹಾರ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ದಿಃ **21-07-1998** ರಲ್ಲಿ ನಾಗಮ್ಮ ಮತ್ತು ಜನಾರ್ಧನ್ ಕುರೂಪ್ ರವರಿಂದ **35** ಸಾವಿರ ನಗದು ಹಣ ಪಡೆದು , ಅವರ ಹಕ್ಕಿನ ಎಲ್ಲಾ ಆಸ್ತಿಗಳನ್ನು ಜನಾರ್ಧನ್ ಕುರೂಪ್ ಮತ್ತು ನಾಗಮ್ಮ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಾವನ ಮತ್ತು ಜೆ ಅನಿಲ್ ರವರು ಒಂದು ಬಾಂಡ್ ಪೇಪರ್ ಮುಖಾಂತರ ಹಕ್ಕು ಖುಲಾಸೆ ಪತ್ರವನ್ನು ನಾಗಮ್ಮ ರವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ **35** ಸಾವಿರ ಹಣವನ್ನು **2** ನೇ ಪ್ರತಿವಾದಿ ಗಂಡ ಸದಾನಂದರವರು ಪಾವತಿ ಮಾಡಿದ್ದರಿಂದ ಜೆ ಅನಿಲ್ ರವರು ಸದಾನಂದರವರ ಹೆಸರಿಗೆ ಕ್ರಯಪತ್ರ (unregistered) ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ. **1** ರ ಪ್ರಕಾರ ಅನಿಲ್ ರವರು ಅವರ ಹಿಸ್ಸೆಯ ಆಸ್ತಿಗಳನ್ನು ಸದಾನಂದರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜೆ ಅನಿಲ್ ರವರು ವಾದಿಯನ್ನು ಕಾನೂನುಬದ್ಧವಾಗಿ, ವಿಧಿಬದ್ಧವಾಗಿ ಮತ್ತು ಶಾಸ್ತ್ರೋಕ್ತವಾಗಿ ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಜನಾರ್ಧನ್ ಕುರೂಪ್ ಮತ್ತು ನಾಗಮ್ಮ ರವರು ವಲಸೆ ಬಂದು ಸಕಲೇಶಪುರದಲ್ಲಿ ನೆಲಸಿರುತ್ತಾರೆ ಎಂದರೆ ಸರಿ. ಆನೆಮಹಲ್ ಹತ್ತಿರ ನಾಗಮ್ಮ ರವರ ಹೆಸರಿಗೆ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಜೆ ಅನಿಲ್ ಪೌತಿಯಾಗುವ ಕಾಲಕ್ಕೆ ನಾಗಮ್ಮ ರವರ ಹೆಸರಿಗೆ ಇರುವ ಆಸ್ತಿಗಳ ಮೇಲೆ ಅವರಿಗೆ ಯಾವುದೇ ಹಕ್ಕಾಗಲೀ ಹಿತಾಸಕ್ತಿಯಾಗಲೀ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ತನ್ನ ಹಿಸ್ಸೆ ಕೇಳಿ ನಾಗಮ್ಮ ರವರ ಬಳಿ ಹೋಗಿದ್ದಾಗ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮತ್ತು ನನ್ನ ಸಹೋದರರ ನಡುವೆ ಆಸ್ತಿಯ ವಿಚಾರದಲ್ಲಿ ವೈಮನಸ್ಸು ಉಂಟಾದಾಗ ಪ್ರತಿವಾದಿಯರು ನನ್ನ ಅಣ್ಣನ ಪರವಾಗಿ ನಿಂತಿದ್ದು ,

ಆ ಕಾರಣ ಅವರ ಮೇಲಿನ ದ್ವೇಷದಿಂದ ನಾನು ವಾದಿ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ಕಾರ್ಯಕ್ರಮವನ್ನು ನಾಯರ್ ಪದ್ಧತಿಯಂತೆ ಮಾಡುತ್ತೇವೆ ಎಂದರೆ ಸರಿ. ಜೆ ಅನಿಲ್ ರವರು ಎಂದಿಗೂ ವಾದಿಯನ್ನು ಮದುವೆಯಾಗಿರುವುದಿಲ್ಲ ಅವರು ಪಾವನರವನ್ನು ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. **2** ರಿಂದ **4** ನೇ ವಾದಿಯರು ಜೆ ಅನಿಲ್ ರವರ ಮಕ್ಕಳಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿ ಅಥವಾ ನಾಗಮ್ಮ ರವರ ಹೆಸರಿನಲ್ಲಿರುವ ಯಾವುದೇ ಆಸ್ತಿಗಳ ಮೇಲೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**5** ನೇ ಪ್ರತಿವಾದಿ ಪರ ಶ್ರೀ ಐ ಇ ಪಿ ವಕೀಲರು ಹಾಜರಿದ್ದು **1** ರಿಂದ **4** ಮತ್ತು **6** ರಿಂದ **8** ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲುನ್ನು **5** ನೇ ಪ್ರತಿವಾದಿ ಪರವಾಗಿ ಅಳವಡಿಸಿಕೊಳ್ಳುವಂತೆ ಕೇಳಿದ ಮೇರೆಗೆ ಯಥಾವತ್ತಾಗಿ ಅಳವಡಿಸಿಕೊಳ್ಳಲಾಯಿತು.

9 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು